ಪ್ರಾಧಿಕಾರದಿಂದ ಟೆಂಡರ್‌ಗೆ ಅನುಮೋದನೆ ಪಡೆದು ಗುತ್ತಿಗೆ ವಹಿಸ ಲಾಗುವುದು.

ಇನ್ನುಳಿದ ಪ್ಯಾಕೇಜುಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಮುದ್ದೇಬಿಹಾಳ ತಂಗಡಗಿ ರಸ್ತೆ ದುರಸ್ತಿ

534 (560) ಶ್ರೀ ಅಪ್ಪಾಜಿ.ಸಿ.ಎಸ್.ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುದ್ದೇಬಿಹಾಳ–ತಂಗಡಗಿ ರಸ್ತೆಯನ್ನು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಬಾರಿ ದುರಸ್ತಿ ಮಾಡಲಾಗಿದೆ;

ಆ) ಈ ರಸ್ತೆ ತುಂಬಾ ಹಾಳಾಗಿದ್ದು ಸಂಚಾರಕ್ಕೆ ಯೋಗ್ಯ ಸ್ಥಿತಿಯಲ್ಲಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ ವರ್ಷ ಸದರಿ ರಸ್ತೆಯನ್ನು ದುರಸ್ತಿ ಮಾಡುವ ಆಶ್ವಾಸನೆ ಕೊಟ್ಟಿದ್ದು, ಇನ್ನೂ ಕೆಲಸ ಪ್ರಾರಂಭವಾಗದಿರಲು ವಿಳಂಬಕ್ಕೆ ಕಾರಣಗಳೇನು;

ಈ) ಈ ರಸ್ತೆಯನ್ನು ಯಾವಾಗ ಪೂರ್ಣ ದುರಸ್ತಿ ಮಾಡಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಮುದ್ದೇಬಿಹಾಳ–ತಂಗಡಗಿ ರಸ್ತೆಯನ್ನು ಕಳೆದ ಮೂರು ವರ್ಷಗಳಲ್ಲಿ ಎರಡು ಬಾರಿ ದುರಸ್ತಿ ಮಾಡಲಾಗಿದೆ.

ಆ) ಗಮನಕ್ಕೆ ಬಂದಿದೆ.

ಇ) ಕಳೆದ ಸಾಲಿನಲ್ಲಿ ಗುಂಡಿ ಮುಚ್ಚುವ ಕಾಮಗಾರಿಯನ್ನು ಕೈಗೆತ್ತಿಕೊಂಡು ಜುಲೈ 2012 ರಲ್ಲಿ ಪೂರ್ಣಗೊಳಿಸಿ, ಸಂಚಾರಕ್ಕೆ ಯೋಗ್ಯ ಸ್ಥಿತಿಗೆ ತರಲಾಗಿರುತ್ತದೆ.

ಈ) ಸದರಿ ರಸ್ತೆಯನ್ನು ಎಸ್.ಹೆಚ್.ಡಿ.ಪಿ ರಡಿ ತೆಗೆದುಕೊಳ್ಳುತ್ತಿರು ವುದಾಗಿ ತಿಳಿದು ಬಂದಿದೆ.

ಮುಳುಗಡೆಯಾಗಿ ಪುನರ್ ವಸತಿಯಾಗದ ಗ್ರಾಮಗಳು

569 (194) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?